ಸೆಲೆಬ್ರಿಟಿ
■ ಹನಿ

# ಆಕಾಶದತ್ತ ಚಿತ್ತ

ಬಹಳಷ್ಟು ಕೋಟ್ಯಧಿಪತಿಗಳಿಗೆ ಹಣ ಹೇಗೆ ಖರ್ಚು ಮಾಡುವುದೆಂದೇ ಗೊತ್ತಿರುವುದಿಲ್ಲ. ಯೂರಿ ಮಿಲ್ನರ್ ತರಹದವರು ಅಪರೂಪ. ಯೂರಿ ಮಿಲ್ನರ್‌ಗೆ ಹಣ ದುಪ್ಪಟ್ಟು ಮಾಡುವುದೂ ಗೊತ್ತು; ಖರ್ಚು ಮಾಡುವುದೂ ಗೊತ್ತು. ಅದನ್ನು ಸಾಬೀತು ಪಡಿಸಲೋ ಎಂಬಂತೆ, ಕಳೆದ ವಾರ ಈತ ತನ್ನ ಸ್ವಂತ ಗಳಿಕೆಯಿಂದ 100 ದಶಲಕ್ಷ ಡಾಲರ್ ಹಣವನ್ನು ಸಂಶೋಧನೆಯೊಂದಕ್ಕೆ ಎತ್ತಿಟ್ಟಿದ್ದಾನೆ. ಆ ಸಂಶೋಧನೆಯೂ ಅಪರೂಪದ್ದೇ– ವಿಶ್ವದಲ್ಲಿ ಭೂಮಿಯನ್ನು ಹೊರತು ಪಡಿಸಿ ಅನ್ಯಗ್ರಹಗಳಲ್ಲಿ ಮನುಷ್ಯರಂತೆ ಬುದ್ಧಿವಂತ ಜೀವಿಗಳು ಇವೆಯೆ– ಎಂದು ಕಂಡುಹಿಡಿಯುವುದು!

'ಯಾರೀ ಯೂರಿ ಮಿಲ್ನರ್?' ಎಂದು ಕೇಳುವಂತಿಲ್ಲ. ಜಗತ್ತಿನಲ್ಲಿ ಹೊಸ ಕಂಪೆನಿಗಳು ಎಲ್ಲೇ ಹುಟ್ಟಿಕೊಳ್ಳಲಿ, ಅದಕ್ಕೆ ಬಂಡವಾಳ ಸುರಿಯಲು ಸಿದ್ಧವಿರುವ ಶ್ರೀಮಂತರ ಪೈಕಿ ಮುಂಚೂಣಿಯಲ್ಲಿರುವ ಕೋಟ್ಯಧೀಶ. ರಷ್ಯಾದಲ್ಲಿ ಹುಟ್ಟಿದರೂ ಅಮೆರಿಕದ ಸಿಲಿಕಾನ್ ವ್ಯಾಲಿಯ ಉದ್ಯಮಿಗಳಿಗೆ ಅತ್ಯಂತ ಪ್ರಿಯನೀತ.

ವಿಶ್ವದಲ್ಲಿ ಅಪರಿಚಿತ ಅನ್ಯಗ್ರಹ ಜೀವಿಗಳ ಕುರಿತು ಸಂಶೋಧನೆ ನಡೆಸಲು ಪ್ರಖ್ಯಾತ ವಿಜ್ಞಾನಿ ಸ್ಟೀಫನ್ ಹಾಕಿಂಗ್ ಜತೆ ಸೇರಿ ಯೂರಿ ಮಿಲ್ನರ್ ನಿರ್ಧರಿಸಿದ್ದೇ ತಡ, ಬಾಹ್ಯಾಕಾಶ ಸಂಶೋಧನಾ ಕ್ಷೇತ್ರದಲ್ಲಿ ಹೊಸ ಸಂಚಲನ ಉಂಟಾಗಿದೆ. ಕಳೆದ ಹತ್ತು ವರ್ಷಗಳಲ್ಲಿ ನಡೆಯದಿದ್ದಷ್ಟು ಮಾಹಿತಿ ಸಂಗ್ರಹ ಹತ್ತೇ ದಿನದಲ್ಲಿ ನಡೆದಿದೆ! ಯೂನಿವರ್ಸಿಟಿ ಆಫ್ ಕ್ಯಾಲಿಫೋರ್ನಿಯಾದ ಸಂಶೋಧಕರು ಹೊಸ ಹುಮ್ಮಸ್ಸಿನಿಂದ ಕೆಲಸದಲ್ಲಿ ತೊಡಗಿದ್ದಾರೆ. ಆಸ್ಟ್ರೇಲಿಯದ ಪಶ್ಚಿಮ ವರ್ಜೀನಿಯ ಮತ್ತು ನ್ಯೂಸೌತ್‌ವೇಲ್ಸ್‌ನಲ್ಲಿದ್ದ ಜಗತ್ತಿನ ಅತಿದೊಡ್ಡ ಎರಡು ಟೆಲಿಸ್ಕೋಪ್‌ಗಳನ್ನು ಈ ಸಂಶೋಧಕರು ಹತ್ತು ವರ್ಷಗಳ ಅವಧಿಗೆ ಬಾಡಿಗೆಗೆ ತೆಗೆದುಕೊಂಡಿದ್ದಾರೆ. ಅತ್ಯಾಧುನಿಕ ಸಂಕೇತ ಸಂಸ್ಕರಣಾ ತಂತ್ರಜ್ಞಾನದ ಮೂಲಕ ರೇಡಿಯೊ ಫ್ರೀಕ್ವೆನ್ಸಿಯ ಸಾಮರ್ಥ್ಯವನ್ನು ಹತ್ತು ಪಟ್ಟು ಹೆಚ್ಚಿಸಲಾಗಿದೆ. ಭೂಮಿಗೆ ಸಮೀಪವಿರುವ ಸುಮಾರು ಒಂದು ಕೋಟಿ ನಕ್ಷತ್ರಗಳಲ್ಲಿ ಏನೆಲ್ಲ ಮಾಹಿತಿಗಳು ಸಿಗಬಹುದು ಎಂಬ ಅನ್ವೇಷಣೆ ಶುರುವಾಗಿದೆ. ಕ್ಷೀರಪಥದ ಆಚೆಗಿರುವ, ಭೂಮಿಗೆ ನಿಕಟ ಎನ್ನಬಹುದಾದ 100 ಗೆಲಾಕ್ಸಿಗಳಲ್ಲೂ (ಆಕಾಶಗಂಗೆ) ಶೋಧ ನಡೆಸಲು ವಿಜ್ಞಾನಿಗಳು ಸಜ್ಜಾಗಿದ್ದಾರೆ. ಇದೆಲ್ಲ ಯೂರಿ ಮಿಲ್ನರ್‌ನ 100 ದಶಲಕ್ಷ ಡಾಲರ್ ಹೂಡಿಕೆಯ ತಕ್ಷಣದ ಪರಿಣಾಮಗಳು. 'ಮುಂದಿನ ಹತ್ತು ವರ್ಷಗಳಲ್ಲಿ ಈ ಕುರಿತ ಸಂಶೋಧನೆ ಒಂದು ತಾತ್ವಿಕ ತೀರ್ಮಾನಕ್ಕೆ ಬರಬಹುದು. ಅನ್ಯಗ್ರಹ ಜೀವಿಗಳ ಬಗ್ಗೆ ಆಗಲೂ ಖಚಿತವಾಗಲಿಲ್ಲ ಎಂದಾದರೆ ಸಂಶೋಧನೆಗೆ ಮತ್ತಷ್ಟು ಹಣ ಹೂಡಲು ನಾನು ಸಿದ್ಧ' ಎಂದು ಯೂರಿ ಘೋಷಿಸಿದ್ದಾನೆ!

54ರ ಹರೆಯದ ಯೂರಿ (ಬರ್ತ್‌ಡೇ 11/11/1961) ಮಾಸ್ಕೊ ಸ್ಟೇಟ್ ಯೂನಿವರ್ಸಿಟಿಯಲ್ಲಿ ಭೌತಶಾಸ್ತ್ರ ಪದವಿ ಪಡೆದಾತ. ರಷ್ಯಾದಿಂದ ಅಮೆರಿಕದಲ್ಲಿ ಸ್ನಾತಕೋತ್ತರ ಪದವಿ ಪಡೆಯಲು ಅನಿವಾಸಿ ಸ್ಥಾನಮಾನ ಪಡೆದು ತೆರಳಿದ ಮೊದಲಿಗ. ತನ್ನ ಓದಿಗೆ ತಕ್ಕಂತೆ ಹಂತ ಹಂತವಾಗಿ ಅತ್ಯುನ್ನತ ಪದವಿಗಳನ್ನು ಅಲಂಕರಿಸುತ್ತಾ, ಸಂಶೋಧನೆ ಮತ್ತು ವ್ಯಾಪಾರ ಎರಡರಲ್ಲೂ ಮೇಲೆ ಬಂದಾತ.



ಯಾವುದೇ ಒಂದು ವಿಷಯಕ್ಕೆ ಸಂಬಂಧಿಸಿ ಹೂಡಿಕೆ ಮಾಡಬೇಕೆಂದರೆ, ತನ್ನ ಇತರ ಗೆಳೆಯರನ್ನು ಹುರಿದುಂಬಿಸುವಲ್ಲಿ ಯೂರಿಯದ್ದು ಎತ್ತಿದ ಕೈ. ಅದಕ್ಕೆ ಆತ 'ವೆಂಚರ್ ಕ್ಯಾಪಿಟಲಿಸ್ಟ್' ಆಗಿ ಪಡೆದ ಯಶಸ್ಸೇ ಕಾರಣ.

ಫೇಸ್‌ಬುಕ್ ಕಂಪೆನಿಯನ್ನೇ ನೋಡಿ– ಆರಂಭದಲ್ಲಿ ಫೇಸ್‌ಬುಕ್ ಎಂಬ ಹೊಸ ಆಲೋಚನೆಗೆ ಯಾರೂ ಹೂಡಿಕೆ ಮಾಡಲು ಮುಂದೆ ಬರದಿದ್ದಾಗ ಯೂರಿ ದೊಡ್ಡ ಮೊತ್ತದ ಹಣವನ್ನು ಅದರಲ್ಲಿ ಹೂಡಿದ. ಟ್ವಿಟ್ಟರ್ ಕಂಪೆನಿ ಬೆಳೆಯಲೂ ಯೂರಿಯ ಬಂಡವಾಳವೇ ಕಾರಣ. ಈಗಂತೂ ಯೂರಿ ಬಂಡವಾಳ ತೊಡಗಿಸುತ್ತಾನೆಂದರೆ, ಉಳಿದ ಶ್ರೀಮಂತರೂ ಹಣ ತೊಡಗಿಸಲು ಕ್ಯೂ ನಿಲ್ಲುತ್ತಾರೆ– ಹಾಗಿದೆ ಪರಿಸ್ಥಿತಿ. ಈಗ **mail.ru** ಮತ್ತು **DST Global** ಎಂಬ ದೈತ್ಯ ಕಂಪೆನಿಗಳ ಮಾಲೀಕನಾಗಿರುವ ಯೂರಿ ಮಿಲ್ನರ್, ಜಿಂಗ್ಯಾ, ಸ್ಪಾಟಿಫೈ, ಜೊಯೊಡಾಕ್, ಗ್ರೂಪಾನ್, ಜೆಡಿ ಡಾಟ್ ಕಾಮ್, ಪ್ಲಾನೆಟ್‌ಲ್ಯಾಬ್ಸ್, ಕ್ಸಿಯಾಮಿ, ಅಲಿಬಾಬಾ ಮುಂತಾಗಿ ಹತ್ತಾರು ಕಂಪೆನಿಗಳಲ್ಲಿ ದೊಡ್ಡ ಮಟ್ಟದ ಬಂಡವಾಳ ಹೂಡಿದ್ದಾನೆ. ಟ್ವಿಟ್ಟರ್‌ನಲ್ಲಿ 800 ದಶಲಕ್ಷ ಡಾಲರ್, ವಾಟ್ಸಾಪ್‌ನಲ್ಲಿ 125 ದಶಲಕ್ಷ ಡಾಲರ್ ಈತನ ಹೂಡಿಕೆಯಿದೆ. ಭಾರತದಲ್ಲೂ ಫ್ಲಿಪ್‌ಕಾರ್ಟ್‌ನಲ್ಲಿ 210 ದಶಲಕ್ಷ ಡಾಲರ್ ಮತ್ತು ಓಲಾ ಕ್ಯಾಬ್ಸ್‌ನಲ್ಲಿ 315 ದಶಲಕ್ಷ ಡಾಲರ್ ಹೂಡಿಕೆ ಮಾಡಿರುವುದು ಭಾರತದಲ್ಲೂ ಈತನ ಅಭಿಮಾನಿಗಳ ಸಂಖ್ಯೆ ಏರುವಂತೆ ಮಾಡಿದೆ.

ಡಿಜಿಟಲ್ ಸ್ಕೈ ಟೆಕ್ನಾಲಜಿ ಕಂಪೆನಿಯ ಮಾಲೀಕನಾಗಿರುವ ಯೂರಿಯ ಒಟ್ಟು ಆಸ್ತಿಯ ಮೊತ್ತ 1.8 ಶತಕೋಟಿ ಡಾಲರ್ ಎನ್ನಲಾಗುತ್ತಿದೆ. 2010ರಲ್ಲಿ ವಿಶ್ವದ 46ನೇ ಅತಿದೊಡ್ಡ ಶ್ರೀಮಂತ ಉದ್ಯಮಿ ಎಂಬ ಹೆಗ್ಗಳಿಕೆ ಹೊಂದಿದ್ದ. (ವಿಶ್ವದ 50 ಅತ್ಯಂತ ಶ್ರೀಮಂತ ಉದ್ಯಮಿಗಳ ಪಟ್ಟಿಯಲ್ಲಿ ರಷ್ಯಾದಿಂದ ಈತನೊಬ್ಬನದೇ ಹೆಸರು!) 2012ರಲ್ಲಿ ವಿಶ್ವದ 50 ಮಂದಿ ಅತ್ಯಂತ ಪ್ರಭಾವಶಾಲಿ ವ್ಯಕ್ತಿಗಳಲ್ಲಿ ಈತನೂ ಒಬ್ಬನಾದ.

ಹುಟ್ಟಿನಿಂದ ಯೆಹೂದಿ ಆಗಿರುವ ಯೂರಿ ಮಿಲ್ನರ್, ಅಮೆರಿಕದಲ್ಲಿ ಎಂಬಿಎ ಪದವಿ ಮುಗಿಸುವುದಕ್ಕೆ ಮುಂಚೆ ಕಂಪ್ಯೂಟರ್ ಸಾಫ್ಟ್‌ವೇರ್‌ಗಳ ಅಕ್ರಮ ಮಾರಾಟದ ವ್ಯಾಪಾರ ಮಾಡುತ್ತಿದ್ದನಂತೆ. ಅದಕ್ಕೆ ಅಪ್ಪ ಗಲಾಟೆ ಮಾಡಿದ ನಂತರ ಎಂಬಿಎ ಮಾಡಲು ಅಮೆರಿಕಕ್ಕೆ ತೆರಳಿದ. 1990ರಲ್ಲಿ ವಿಶ್ವಬ್ಯಾಂಕ್‌ನ ಮಹತ್ವದ ಹುದ್ದೆ ಸಿಕ್ಕಿತು. ಅಲ್ಲಿಂದ ಹೂಡಿಕೆ ಬ್ಯಾಂಕ್ ಒಂದರ ಉನ್ನತ ಹುದ್ದೆಗೆ ಜಿಗಿತ. ಗೆಳೆಯರಿಬ್ಬರನ್ನು ಒಟ್ಟು ಸೇರಿಸಿ ನೆಟ್‌ಬ್ರಿಡ್ಜ್ ಎಂಬ ಇಂಟರ್‌ನೆಟ್ ಕಂಪೆನಿ ಶುರು ಮಾಡಿದ. ಈಗ ಎಷ್ಟು ಬ್ಯುಸಿ ಎಂದರೆ, 'ಹವ್ಯಾಸಗಳಿಗೂ ಪುರುಸೊತ್ತಿಲ್ಲ' ಎನ್ನುತ್ತಾನೆ. ಲಾಸ್ ಅಲ್ಟಾಸ್ ಹಿಲ್ಸ್‌ನಲ್ಲಿ 100 ದಶಲಕ್ಷ ಡಾಲರ್ ಕೊಟ್ಟು ದೊಡ್ಡ ಐಶಾರಾಮಿ ಬಂಗಲೆ ಖರೀದಿಸಿದ್ದಾನೆ. ಏಳು ಹೆಕ್ಟೇರ್ ಜಾಗದ ಮಧ್ಯೆ 25,500 ಚದರ ಅಡಿಯ ಬಂಗಲೆ ಮತ್ತು 5550 ಚದರ ಅಡಿಯ ಗೆಸ್ಟ್‌ಹೌಸ್ ವಿಶ್ವದ ಗಣ್ಯಾತಿಗಣ್ಯರಿಗೆಲ್ಲ ಔತಣ ನೀಡಿದೆ. ತನ್ನಂತೆಯೇ ಪ್ರತಿಭಾವಂತರನ್ನು ಗುರುತಿಸಿ ಗೌರವಿಸುವುದರಲ್ಲೂ ಯೂರಿಯದ್ದು ಎತ್ತಿದ ಕೈ. ಭೌತಶಾಸ್ತ್ರ, ಲೈಫ್ ಸಯನ್ಸ್ ಮತ್ತು ಅಂಕಗಣಿತದಲ್ಲಿ ಸಾಧನೆ ಮಾಡಿದವರನ್ನು ಗುರುತಿಸಿ ಪ್ರತಿವರ್ಷ 30 ಲಕ್ಷ ಡಾಲರ್ ಬಹುಮಾನ ನೀಡುತ್ತಿರುವುದಂತೂ ಗ್ರೇಟ್! ■

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65